ಐದುನೂರಕ್ಕೂ ಹೆಚ್ಚು ಜನ ಒಂದು ಕೈಯಲ್ಲಿ ಕೊಡೆ ಇನ್ನೊಂದು ಕೈಯಲ್ಲಿ ಆಫೀಸಿನಲ್ಲಿ ಧರಿಸಲು ಒಂದು ಜೊತೆ ಬಟ್ಟೆ ಹಾಗು ಶೂವನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟುಕೊಂಡು ಗುರುಪಾದನ ಸಂಗಡವೇ ಹೊರಟಿದ್ದರು. ಕೆಲವರು ಬೆಳಗಿನ ತಿಂಡಿ ಎಂದು ಡಂಪ್ಲಿಂಗ್ ಷಾಪ್‌ನಲ್ಲಿ ಖರೀದಿಸಿದ್ದ ಜೋಳದ ಸೂಪ್ ಮತ್ತು ಬಿಳಿಯ ಮುದ್ದೆ ಬ್ರೆಡ್‌ನ್ನು ಅವರವರ ಕೊಡೆಗೆ ನೇತು ಹಾಕಿಕೊಂಡು ಬೇಕ್‌ಬೇಕಾದಾಗ ಹೀರುತ್ತಿದ್ದರು. ಆತನಿಗೆ ಗೊತ್ತಿರುವ ಹಾಗೂ ಅವನ ಜೊತೆ ಕೆಲಸ ಮಾಡುವ ಬಹಳಷ್ಟು ಬ್ಯಾಟರಿ ಚಾಲಿತ ಸೈಕಲ್ಲಿನಲ್ಲಿ ಚಲಿಸುವ ಮತ್ತು ಅವನ ಜೊತೆ ನಡಿಯುತ್ತಿದ್ದ ಜನ ಅವರ ಭಾಷೆಯಲ್ಲಿ 'ಗುಡ್ ಮಾರ್ನಿಂಗ್' 'ಗುಡ್ ಮಾರ್ನಿಂಗ್' ಎಂದು ಸುಪ್ರಭಾತ ಹೇಳುತ್ತಿದ್ದರು. ಆಫೀಸಿಗೆ ಹೋಗುತ್ತಿರುವ ಜನರನ್ನು ನೋಡಿ 'ಮಳೆಯಿಂದ ಜನರಲ್ಲ, ಜನರಿಂದಲೇ ಮಳೆ ಕೊಚ್ಚಿಕೊಂಡು ಹೋಗಬೇಕು' ಎನ್ನುವ ಧೈರ್ಯದಿಂದ ಮುಂದೆ ಹೆಜ್ಜೆ ಹಾಕಿದ.

ಇನ್ನೇನು ನೂರು ಹೆಜ್ಜೆ ಹಾಕಿರಲಿಲ್ಲ ಯಾವತ್ತೂ ಎದುರಾಗುವ ಸರ್ಕಲ್ ಸಮೀಪಿಸಿತ್ತು. ಪ್ರತಿ ದಿನವೂ ವಿಶಾಲವಾದಮೈದಾನದಂತೆ ಕಾಣುವ ಈ ಸರ್ಕಲ್ಲಿನಲ್ಲಿ ಇವತ್ತು ಮಾತ್ರ ಏನಿಲ್ಲವೆಂದರೂ ಮೊಣಕಾಲಿನವರೆಗೆ ಮಣ್ಣಿನಿಂದ ಕಣಕಾದ ನೀರು ಹರಿಯುತ್ತಿತ್ತು. ರಸ್ತೆಯ ಇಕ್ಕೆಲದಲ್ಲಿ ಗಿಡಗಳನ್ನು ಗಟ್ಟಿಯಾಗಿ ಹಿಡಿದ ಮಣ್ಣು, ಮಳೆಯಿಂದ ಸಡಿಲವಾಗಿ ನೀರಲ್ಲಿ ಹರಿದು ಹೋಗಬಾರದೆಂದು ಗೋಣಿಯ ಬಟ್ಟೆ ಹರಗಿದ್ದರೂ ಅದನ್ನು ಮೀರಿ ಆ ಶೇಡಿ ಜಾತಿಯ ಮಣ್ಣು ನೀರಲ್ಲಿ ಕರಡಿ ಕರಡಿ ಹಾಲಾಗಿತ್ತು. ಇಷ್ಟು ದೇಶ ನೋಡಿದರೂ ಈ ರೀತಿ ಮಳೆ ಕಂಡಿರಲಿಲ್ಲ; ತನ್ನ ಬಾಲ್ಯವೊಂದನ್ನು ಬಿಟ್ಟು –

ಉತ್ತರ ಕನ್ನಡದ ಆ ಕರಾವಳಿಯ ಜೀರಂಪತಿ ಮಳೆ.

ಒಮ್ಮೆ ಹಿಡಿದರೆ ವಾರ ಮುಗಿದರೂ ಬಿಡದ ಮಳೆ.

ಶೇಡಿ ಮಣ್ಣೆಲ್ಲ ಕರಡಿ ಹಾಲಾಗುವ ಮಳೆ.

ಹೊಳೆಯ ಕಹಿ ಜಬ್ಬು ಮೀನೆಲ್ಲಾ ಗದ್ದೆಗೆ ಹತ್ತುವ, ಊಟದ ಬಟ್ಟಲಿನಲ್ಲೇ ಮೀನನ್ನು ಹಿಡಿಸುವ ಮಳೆ.

ಹೊಸ ಅಕ್ಕೊರನ್ನು ಹರ್ಕಂಡು ಬೀಳಿಸಿ, ಶಾಲೆಗೇ ರಜೆ ಕೊಡಿಸುವ ಮಳೆ.

ಆ ಕಾಲದಲ್ಲಿ ಶ್ರಾದ್ಧವನ್ನೂ ಹಬ್ಬವಾಗಿ ಪರಿವರ್ತಿಸುವ ಮಳೆ – ವಡೆ, ಪಾಯಸ, ಕೇಸರಿ, ಕಡುಬು, ಕಾಯಿ ಶುಂಟಿ ಚಟ್ನಿಯ ಪರಿಮಳವನ್ನು ಉಳಿದೆಲ್ಲ ವಾಸನೆಯನ್ನು ಬದಿಗೆ ಸರಿಸಿ ನೇರವಾಗಿ ಮೂಗಿಗೆ ಮುಟ್ಟಿಸುತ್ತಿತ್ತು. ಅದೇ ಮಳೆ, ಎಲ್ಲ ಹುಳುಕನ್ನು ಮರೆಯುವ ಪರೋಪಕಾರಿಯೂ ಆಗುತ್ತಿತ್ತು.

ಶಾಲೆಯ ಜಗುಲಿಯನ್ನೆಲ್ಲ ಒದ್ದೆ ಮಾಡಿ ನಿರಪರಾಧಿ ಮಕ್ಕಳು ಮತ್ತು ಶಿಕ್ಷಕರ ಮೇಲೆ ಮುನಿಸಿಕೊಳ್ಳುವ ಮಳೆಯ ನೆನಪಾಗಿ ಗುರುಪಾದನ ಮನಸ್ಸೆಲ್ಲ ಹಸಿರಾಯಿತು. ಎದುರಿದ್ದ ಮೊಣಕಾಲಳತೆಯ ನೀರನ್ನು ಲೆಕ್ಕಿಸದೇ ಪ್ಯಾಂಟ್ ಮೇಲೆತ್ತಬೇಕು, ಶೂ ಕಳಚಬೇಕು ಎನ್ನುವದನ್ನೆಲ್ಲ ಮರೆತು ಒಮ್ಮೇಲೆ ಬೆತ್ತಲಾದ ನಿರುಂಬಳತೆಯಿಂದ ಶಾಲೆಗೆ ಹೊರಟ ಮಕ್ಕಳಂತೆ ಎಲ್ಲರೊಂದಿಗೆ ಆ ಜಲಾವೃತ ಕೆರೆಯಾದ ಸರ್ಕಲ್ ದಾಟಿದ. ಇವನೊಂದಿಗೆ ದಾಟುತ್ತಿದ್ದ ಕೆಲವರು ಆಶ್ಚರ್ಯದಿಂದಲೂ ಇನ್ನು ಕೆಲವರು 'ಇವ ನಮ್ಮವ ಇವ ನಮ್ಮವ ಇವ ನಮ್ಮವ' ಎಂದು ತಮ್ಮ ತಮ್ಮ ಮುಖದಲ್ಲಿ ಪ್ರಕಟಿಸುತ್ತಿದ್ದರು. ಸರ್ಕಲ್ ದಾಟಿದ್ದೇ ದಿನವೂ ಇಂಗ್ಲೀಷಿನಲ್ಲಿ 'ಹಲೋ' ಎಂದು ಹೇಳುವ ತನ್ನ ಪಂಚರ್ ಅಂಗಡಿಯ ಮಿತ್ರ ಯೆನ್ಜೂನ್ ಮುಂದೆ ಏನನ್ನೂ